ವಿದ್ಯಾರ್ಹತೆ ಇಲ್ಲದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬಗ್ಗೆ

870 (437) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕರ್ನಾಟಕ ಗೃಹ ಮಂಡಳಿ, ಶಿವಮೊಗ್ಗ ಈ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬರು ಸೇವೆಗೆ ಸೇರುವಾಗ ವಿದ್ಯಾರ್ಹತೆ ಮತ್ತು ಇತರೆ ದಾಖಲಾತಿಗಳನ್ನು ತಿದ್ದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕ್ರಮಬದ್ಧ ವಿದ್ಯಾರ್ಹತೆ ಇಲ್ಲದಿದ್ದರೂ ಇವರನ್ನು ಸೇವೆಯಲ್ಲಿ ಯಾವ ನಿಯಮದಡಿ ಮುಂದುವರೆಸಲಾಗಿದೆ; ವಿವರಿಸುವಿರಾ;

ಇ) ಶಿವಮೊಗ್ಗ ತಾಲ್ಲೂಕಿನಲ್ಲಿ ಕರ್ನಾಟಕ ಗೃಹ ಮಂಡಳಿಯಲ್ಲಿ ಸಾರ್ವಜನಿಕರಿಗೆ ಹಂಚಿಕೆಗೆ ಲಭ್ಯವಿರುವ ಸಾರ್ವಜನಿಕ ಉಪಯೋಗಿ ನಿವೇಶನಗಳೆಷ್ಟು; ವಿವರ ಒದಗಿಸುವುದು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು) :

ಅ) ಹೌದು.

ಆ) ಸದರಿಯವರಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಪದೋನ್ನತಿ ನೀಡಿದ ನಂತರ ಪದೋನ್ನತಿ ಹೊಂದಲು ಸಲ್ಲಿಸಿದ ದಾಖಲಾತಿಗಳು ನಕಲಿ ಎಂದು ತಿಳಿದು ಬಂದ ಹಿನ್ನೆಲೆಯಲ್ಲಿ ಅವರಿಗೆ ನೀಡಲಾದ ಪದೋನ್ನತಿಯನ್ನು ಹಿಂಪಡೆಯಲಾಗಿತ್ತು. ಆದರೆ ಸದರಿಯವರು ಈ ಆದೇಶದ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಸದರಿ ಆದೇಶಕ್ಕೆ ತಡೆಯಾಜ್ಞೆ ತಂದಿರುತ್ತಾರೆ. ಮಾನ್ಯ ನ್ಯಾಯಾಲಯದ ಆದೇಶದಂತೆ ಸದರಿಯವರನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಯಲ್ಲಿ ಮುಂದುವರಿಸಲಾಗಿದೆ. ಮಾನ್ಯ ಉಚ್ಚನ್ಯಾಯಾಲಯವು ಈಗ ಮಧ್ಯಂತರ ಆದೇಶವನ್ನು ನೀಡಿದ್ದು, ಅದರಂತೆ ಕ್ರಮವಹಿಸಿ ಸದರಿಯವರನ್ನು ಅಮಾನತ್ತಿನಲ್ಲಿಡಲಾಗಿದೆ ಹಾಗೂ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ದೋಷಾರೋಪಣಾ ಪಟ್ಟಿಗಳನ್ನು ಜಾರಿಗೊಳಿಸಲಾಗಿದೆ.

ಇ)

1) ಗೋಪಿಶೆಟ್ಟಿ ಕೊಪ್ಪ, ಶಿವಮೊಗ್ಗ, ಖಾಲಿ ಇರುವ ನಿವೇಶನಗಳು 02

ಅ) ಸಿ.ಎ.ನಿವೇಶನ ಸಂಖ್ಯೆ:02 ಸಮುದಾಯ ಭವನಕ್ಕೆ ಕಾಯ್ದಿರಿಸಿದೆ.

ಆ) ಸಿ.ಎ. ನಿವೇಶನ ಸಂಖ್ಯೆ:04 ಗ್ರಂಥಾಲಯಕ್ಕೆ ಕಾಯ್ದಿರಿಸಿದೆ.

2) ಸೋಮಿನಕೊಪ್ಪ, ಶಿವಮೊಗ್ಗ, ಖಾಲಿ ಇರುವ ನಿವೇಶನಗಳು 02

ಅ) ಸಿ.ಎ. ನಿವೇಶನ ಸಂಖ್ಯೆ:02 ಮತ್ತು 03 ಯಾವುದೇ ಉದ್ದೇಶಕ್ಕೆ ಮೀಸಲಿಟ್ಟಿರುವುದಿಲ್ಲ.

3) ಸೋಗಾನೆ, ಶಿವಮೊಗ್ಗ, ಖಾಲಿ ಇರುವ ನಿವೇಶನಗಳು 03

ಅ) ಸಿ.ಎ. ನಿವೇಶನ ಸಂಖ್ಯೆ:01, 02, ಮತ್ತು 03 ಯಾವುದೇ ಉದ್ದೇಶಕ್ಕೆ ಮೀಸಲಿಟ್ಟಿರುವುದಿಲ್ಲ.

870 (437) Sri. Kumaraswamy K.G. (Shimoga Rural : Hon'ble Housing Minister,

a) Has it come to the notice of the Government that, one person who is working as A.E.E., in KHB, Shimoga, has given fake education & other documents while entering into Government Service?

b) Can it be explained that, on which rule he has been continued in service though he has no prescribed educational qualification?

c) How many C.A. sites are available for allotment to the public at Shimoga by KHB?

Sri. V. Somanna (Minister for Housing) :

a) Yes.

b) After promoting to the post of A.E.E. based on the B.E. graduation, it came to the notice that the documents submitted by him are fake, Immediately the promotion was withdrawn, but, order of this withdrawal of the promotion was stayed by the Hon'ble High court. Further that stay order was challenged by KHB in the Hon'ble High court, for which the Hon'ble High Court has given an interim order stating that

disciplinary proccedings be initiated against the official without disturbing his post. As per the orders of the Hon'ble High court the official has been kept under suspension, and article of charges has been served to initiate departmental enquiry.

c)

1) **Gopishettikoppa, Shimoga, 02 C.A. sites vacant.**
   a) C.A. site No.01, reserved for Convention Hall.
   b) C.A. Site No.04, reserved for Library.

2) **Sominakoppa, Shimoga, 02 C.A. sites vacant.**
   a) C.A. Site No.02 & 03 not reserved for any purpose.

3) **Sogane, Shimoga, 03 C.A. sites vacant.**
   a) C.A. Site No.01, 02 & 03 not reserved for any purpose.

ಹೆತ್ತೂರು ಗ್ರಾಮಕ್ಕೆ ವಿದ್ಯುತ್ ವಿತರಣಾ ಕೇಂದ್ರ ಮಂಜೂರಾತಿ

871 (906) ಶ್ರೀ ಕುಮಾರಸ್ವಾಮಿ. ಹೆಚ್.ಕೆ. (ಸಕಲೇಶಪುರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಹೆತ್ತೂರು ಗ್ರಾಮಕ್ಕೆ ಈ ಹಿಂದೆ ವಿದ್ಯುತ್ ವಿತರಣಾ ಉಪ ಕೇಂದ್ರ ಮಂಜೂರಾಗಿ ಸ್ಥಗಿತ ಗೊಂಡಿರುವುದು ನಿಜವೇ;

ಆ) ಈ ಉದ್ದೇಶಕ್ಕಾಗಿ ಈಗಾಗಲೇ ಜಾಗ ಮಂಜೂರಾಗಿ ಸ್ವಾಧೀನ ನೀಡಿರುವುದು ನಿಜವೇ; ಯಾವಾಗ ಕೇಂದ್ರವನ್ನು ಮಂಜೂರು ಮಾಡಲಾಗುವುದು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಮತ್ತು ಆ)

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಗ್ರಾಮಕ್ಕೆ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರವು ಮಂಜೂರಾಗಿರುತ್ತದೆ.